# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 263
ಸದಸ್ಯರ ಹೆಸರು : ಶ್ರೀ ಪ್ರಾಣೇಶ್ ಎಂ.ಕೆ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 12.07.2018
ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು

*****

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಒಟ್ಟು ಎಷ್ಟು ಎಸ್ಕಾಂಗಳಿವೆ; ಅವು ಯಾವುವು; ಎಸ್ಕಾಂವಾರು ಮಂಜೂರಾದ, ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; | ರಾಜ್ಯದಲ್ಲಿ ಒಟ್ಟು 5 ವಿದ್ಯುತ್ ಸರಬರಾಜು ಕಂಪನಿಗಳು ಕಾರ್ಯನಿರ್ವಹಿಸುತ್ತಿದ್ದು, ವಿವರಗಳು ಕೆಳಕಂಡಂತಿವೆ:<br>1. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ<br>2. ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ<br>3. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ<br>4. ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ<br>5. ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ<br><br>ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ 31-03-2018 ರಲ್ಲಿದ್ದಂತೆ ಮಂಜೂರಾದ - ಖಾಲಿಯಿರುವ ಹುದ್ದೆಗಳ ವಿವರಗಳನ್ನು **ಅನುಬಂಧ-1**ರಲ್ಲಿ ಒದಗಿಸಲಾಗಿದೆ. |
| ಆ) | ಕಳೆದ 5 ವರ್ಷಗಳ ಎಸ್ಕಾಂಗಳ ವಾರ್ಷಿಕ ಲಾಭ-ನಷ್ಟದ ಪರಿಮಾಣ ಎಷ್ಟು ; (ವರ್ಷವಾರು, ಎಸ್ಕಾಂವಾರು ವಿವರ ನೀಡುವುದು) | ಕಳೆದ 5 ವರ್ಷಗಳ ವಿದ್ಯುತ್ ಸರಬರಾಜು ಕಂಪನಿಗಳ ವಾರ್ಷಿಕ ಲಾಭ/ನಷ್ಟದ ವರ್ಷವಾರು ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ. |
| ಇ) | ವಿವಿಧ ಎಸ್ಕಾಂ ವಲಯಗಳಲ್ಲಿ ಬಾಕಿ ಇರುವ ವಿದ್ಯುತ್ ಬಿಲ್ಲಿನ ಮೊತ್ತವೆಷ್ಟು ; ವಸೂಲಾಗದ ಮೊತ್ತದ ಸರಾಸರಿ ಪರಿಮಾಣ ಎಷ್ಟು ; (ವರ್ಷವಾರು, ಎಸ್ಕಾಂವಾರು ವಿವರ ನೀಡುವುದು) | ಕಳೆದ 5 ವರ್ಷಗಳಲ್ಲಿ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಬಾಕಿಯಿರುವ ವಿದ್ಯುತ್ ಬಿಲ್ಲಿನ ಮೊತ್ತ ಹಾಗೂ ವಸೂಲಾದ ಮೊತ್ತದ ಸರಾಸರಿ ಪ್ರಮಾಣದ ವರ್ಷಾವಾರು ವಿವರಗಳನ್ನು **ಅನುಬಂಧ-3**ರಲ್ಲಿ ಒದಗಿಸಲಾಗಿದೆ. |
| ಈ) | ಬಾಕಿ ವಿದ್ಯುತ್ ವಸೂಲಿ, ವಿದ್ಯುತ್ ಕಳ್ಳತನ ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು ; | ವಿದ್ಯುತ್ ಸರಬರಾಜು ಕಂಪನಿಗಳವತಿಯಿಂದ ವಿದ್ಯುತ್ ಬಿಲ್ ಬಾಕಿ ವಸೂಲಾತಿಗೆ ಹಾಗೂ ವಿದ್ಯುತ್ ಕಳ್ಳತನ ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>**ಬಾಕಿ ವಸೂಲಾತಿ:**<br><br>ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುತ್ ಸರಬರಾಜು) ಅಧಿನಿಯಮ, 2004 (ಅನುಬಂಧ-4) ರ ನಿಯಮ 29.01ರಲ್ಲಿ ನಿರ್ದಿಷ್ಟಪಡಿಸಿರುವ ಕ್ರಮಗಳನ್ನು ಅನುಸರಿಸಲಾಗುತ್ತದೆ. ಗ್ರಾಹಕರಿಗೆ ವಿದ್ಯುತ್ ಬಿಲ್ಲು ಪಾವತಿ ಮಾಡಲು ಅವಧಿ ಮುಗಿದ ನಂತರ 15 ದಿನಗಳ ಗಡುವು ನೀಡಲಾಗುತ್ತದೆ. ನಂತರ ವಿದ್ಯುತ್ ನಿಲುಗಡೆ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ. ಕಂಡಿಕೆ 29.02ರಂತೆ ತಡ ಪಾವತಿಗೆ, ಕಾಲಂ 29.05ರ ಪ್ರಕಾರ ಶುಲ್ಕವನ್ನು ವಸೂಲಿ ಮಾಡಲಾಗುತ್ತದೆ.<br><br>ತಡ ಪಾವತಿಯ ಪ್ರಕರಣದಲ್ಲಿ, ಗಡುವು ದಿನಾಂಕದ ನಂತರದ ಪ್ರತಿ ದಿನಕ್ಕೆ, ಬಿಲ್ಲಿನ ಮೊಬಲಗಿನ ಮೇಲೆ ಮಾಸಿಕ ಶೇ.1ರ ಪ್ರಕಾರ, ಎಲ್.ಟಿ. ಸ್ಥಾಪನಗಳಿಗೆ ಕನಿಷ್ಠ ರೂ.1 ಮತ್ತು ಎಚ್.ಟಿ. ಸ್ಥಾಪನಗಳಿಗೆ ಕನಿಷ್ಠ ರೂ.100 ರ ದರದಲ್ಲಿ ಬಡ್ಡಿಯನ್ನು ವಿಧಿಸಲಾಗುವುದು. |

...2)

| | | |
|---|---|---|
| | | ವಿದ್ಯುತ್ ನಿಲುಗಡೆ ಮಾಡಿದ ನಂತರವೂ ಗ್ರಾಹಕರು ವಿದ್ಯುತ್ ಬಿಲ್ಲನ್ನು ಪಾವತಿಸದೇ ಇದ್ದಲ್ಲಿ ತದನಂತರ ಗ್ರಾಹಕರ ಭದ್ರತಾ ಠೇವಣಿಯನ್ನು ಬಾಕಿಯೊಂದಿಗೆ ಹೊಂದಾಣಿಕೆ ಮಾಡಿ ಅವರ ಕರಾರು ಪತ್ರವನ್ನು ರದ್ದುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತದೆ. ನಂತರ "ಲ್ಯಾಂಡ್ ರಿಕವರೀಸ್ ಆಕ್ಟ್-1976" ಪ್ರಕಾರ ವಿದ್ಯುತ್ ಬಾಕಿಯನ್ನು ವಸೂಲಿ ಮಾಡಲು ಕ್ರಮ ತೆಗೆದುಕೊಳ್ಳುತ್ತಿದೆ.<br>**ವಿದ್ಯುತ್ ಕಳ್ಳತನ:**<br>• ವಿದ್ಯುತ್ ಕಳ್ಳತನವನ್ನು ತಡೆಗಟ್ಟಲು ಜಾಗೃತ ದಳವು ಸಕ್ರಿಯವಾಗಿದ್ದು ಕಾಲ ಕಾಲಕ್ಕೆ ಸ್ಥಾವರಗಳ ತಪಾಸಣೆಯನ್ನು ನಡೆಸಿ ವಿದ್ಯುತ್ ಕಳ್ಳತನವಾಗದಂತೆ ಎಚ್ಚರವಹಿಸುತ್ತದೆ. ವಿದ್ಯುಚ್ಛಕ್ತಿ ಕಾಯಿದೆ 2003 ರ ಸೆಕ್ಷನ್ 126 ಮತ್ತು 135 ರ ಅಡಿಯಲ್ಲಿ ಸಂಜ್ಞೇಯ ಮತ್ತು ಅಸಂಜ್ಞೇಯ ಪ್ರಕರಣಗಳನ್ನು ಜಾಗೃತದಳದ ಪೊಲೀಸ್ ಠಾಣೆಯಲ್ಲಿ ದಾಖಲಿಸಲಾಗುತ್ತಿದೆ.<br>• ಅತ್ಯಂತ ಹೆಚ್ಚು ಅಗತ್ಯತೆ ಕಂಡು ಬಂದ ಸಂದರ್ಭಗಳಲ್ಲಿ ಸಾಮೂಹಿಕ ದಾಳಿಯ ಮೂಲಕ ವಿದ್ಯುತ್ ಕಳುವು ಪ್ರಕರಣ ದಾಖಲಿಸಿ ಈ ಬಗ್ಗೆ ಜನಜಾಗೃತಿ ಮೂಡಿಸುವುದು.<br>• ವಿಶೇಷವಾಗಿ ಕೈಗಾರಿಕೆ ಮತ್ತು ವಾಣಿಜ್ಯ ಉದ್ದೇಶಕ್ಕಾಗಿ ಅಳವಡಿಸಿಕೊಂಡಿರುವ ವಿದ್ಯುತ್ ಸ್ಥಾವರಗಳಿಗೆ ಭೇಟಿ ನೀಡಿ ಅಳವಡಿಸಿಕೊಂಡಿರುವ ವಿದ್ಯುತ್ ಸಂಪರ್ಕದ ಕ್ರಮ ಬದ್ಧತೆಯನ್ನು ಪರಿಶೀಲಿಸುವುದು ಅವಶ್ಯಕತೆಯಿದ್ದಲ್ಲಿ ಸಂಜ್ಞೆಯ, ಅಸಂಜ್ಞೇಯ ಪ್ರಕರಣ ದಾಖಲಿಸುವುದು.<br>• ತಾತ್ಕಾಲಿಕ ಸ್ಥಾವರಗಳನ್ನು ನಿಯಮಿತವಾಗಿ ಪರಿಶೀಲಿಸಿ ಅವುಗಳಲ್ಲಿ ಲೋಪದೋಷಗಳಿದ್ದಲ್ಲಿ ದಾವೆಗಳನ್ನು ಹೂಡುವುದು.<br>• ಮಾಪನ ಪರೀಕ್ಷ ವಿಭಾಗಾಧಿಕಾರಿಗಳ ಜೊತೆಯಲ್ಲಿ ತಪಾಸಣೆ ನಡೆಸಿ ಅವಶ್ಯಕತೆಯಿದ್ದಲ್ಲಿ ದೋಷಪೂರಿತ ಸ್ಥಾವರಗಳಿಗೆ ಪ್ರಕರಣಗಳನ್ನು ದಾಖಲಿಸಿ ದಾವೆ ಹೂಡುವುದು.<br>• ಜನ ಸಾಮ್ಯಾನರು/ ಗ್ರಾಹಕರು ನೀಡಿರುವ ದೂರುಗಳನ್ನಾಧರಿಸಿ (Petitions) ಸಂಬಂಧಪಟ್ಟ ಸ್ಥಳಗಳನ್ನು ಕೂಲಂಕುಶವಾಗಿ ಪರಿಶೀಲನೆ ಮಾಡಿ ಅವಶ್ಯವಿದ್ದಲ್ಲಿ ಸಂಜ್ಞೆಯ/ಅಸಂಜ್ಞೇಯ ಪ್ರಕರಣಗಳನ್ನು ದಾಖಲಿಸುವುದು.<br>• ನೇರ ವಿದ್ಯುತ್ ಸಂಪರ್ಕ ಹೊಂದಿರುವವರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸುವುದು.<br>• ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಮೊದಲನೇ ಅಪರಾಧಕ್ಕೆ ದಂಡ ವಿಧಿಸಲಾಗುತ್ತದೆ, 2ನೇ ಸಲದ ಅಪರಾಧ ಮಾಡಿ ಸಾಬೀತಾದರೆ ಜೈಲು ಶಿಕ್ಷೆ ವಿಧಿಸಲು ಅವಕಾಶವಿರುತ್ತದೆ. |
| ಉ) | ವಿದ್ಯುತ್ ಬಿಲ್ ಪಾವತಿಯನ್ನು ನಗದು ರಹಿತವನ್ನಾಗಿ ಮಾಡಲು, ಆನ್‌ಲೈನ್ ಪಾವತಿ ಮತ್ತು ಆ್ಯಪ್ ಆಧಾರಿತ ಪಾವತಿಗೆ ಪ್ರೋತ್ಸಾಹಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ; ಹಾಗೂ ಮುಂದೆ ಯಾವ ಕ್ರಮ ಕೈಗೊಳ್ಳಲಿದೆ ? | ವಿದ್ಯುತ್ ಸರಬರಾಜು ಕಂಪನಿಗಳ ವತಿಯಿಂದ ವಿದ್ಯುತ್ ಬಿಲ್ ಪಾವತಿಯನ್ನು ನಗದು ರಹಿತವನ್ನಾಗಿ ಮಾಡಲು ಈ ಕೆಳಕಂಡ ಆನ್‌ಲೈನ್ ಪಾವತಿ ಹಾಗೂ ಆ್ಯಪ್ ಆಧಾರಿತ ಪಾವತಿಯನ್ನು ಪ್ರೋತ್ಸಾಹಿಸಲು ಈ ಕೆಳಕಂಡ ಸೇವೆಗಳ ಸೌಲಭ್ಯಗಳನ್ನು ಬಳಕೆದಾರರಿಗೆ ಕಲ್ಪಿಸಲಾಗಿದೆ:-<br>• ಆನ್‌ಲೈನ್ ಪಾವತಿ ಸೇವೆಗಳು:<br>1. ಇ.ಸಿ.ಎಸ್/ಎನ್.ಎ.ಸಿ.ಎಚ್<br>2. ಬಿಲ್‌ಡೆಸ್ಕ್ ಆನ್‌ಲೈನ್<br>3. ಐ.ಡಿ.ಬಿ.ಐ<br>4. ಕರ್ನಾಟಕ ಒನ್ |

| | | |
|---|---|---|
| | | 5. ಬೆಂಗಳೂರು ಒನ್ /ಗುಲ್ಬರ್ಗ ಒನ್/ಹುಬ್ಬಳ್ಳಿ-ಧಾರವಾಡ ಒನ್/ಮಂಗಳೂರು ಒನ್/ಮೈಸೂರು ಒನ್<br>6. ಬಿಲ್ ಜಂಕ್ಷನ್<br>7. ಖಜಾನೆ -2<br>8. ಬಿಲ್‌ಡೆಸ್ಕ್ ಇ.ಬಿ.ಪಿ<br>9. ಎನ್.ಇ.ಎಫ್.ಟಿ/ಆರ್.ಟಿ.ಜಿ.ಎಸ್.<br>• <u>ಮೊಬೈಲ್ ಆ್ಯಪ್ ಆಧಾರಿತ ಸೇವೆಗಳು:</u><br>1. ಬೆಸ್ಕಾಂ ಮಿತ್ರ<br>2. ಪೇ.ಟಿ.ಎಂ<br>3. ಪೇಯು<br>4. ಐ.ಎಮ್.ಐ<br><br>ಈ ಎಲ್ಲಾ ಸೇವೆಗಳ ಹೊರತಾಗಿ ಈ ಕೆಳಕಂಡ ಆನ್‌ಲೈನ್ ಹಾಗೂ ಆ್ಯಪ್ ಆಧಾರಿತ ಸೇವೆಗಳನ್ನು ಕೂಡ ಒದಗಿಸಲು ಈಗಾಗಲೇ ಸೂಕ್ತ ಕ್ರಮ ಕೈಗೊಳ್ಳಲಾಗಿದೆ:-<br>2. ವಿಜಯ ಬ್ಯಾಂಕ್ - ಪಿ.ಜಿ ಸೇವೆಗಳು<br>3. Bharath Bill Payment System (ಭಾರತ ಸರ್ಕಾರ ಉಪಕ್ರಮ)<br>4. Unified Payment Interface (UPI)/ Bharath Interface for Money (BHIM) ಪೇಮೆಂಟ್ಸ್ (ಭಾರತ ಸರ್ಕಾರ ಉಪಕ್ರಮ)<br>5. ಆಕ್ಸಿಸ್ ಬ್ಯಾಂಕ್ - ಪಿ.ಜಿ ಸೇವೆಗಳು<br>6. ಗ್ರೂಪ್ ಪೇಮೆಂಟ್ಸ್ (ಎಸ್-ಬ್ಯಾಂಕ್) |

ಸಂಖ್ಯೆ: ಇಎನ್ 116 ಇಬಿಎಸ್ 2018

**(ಹೆಚ್.ಡಿ.ಕುಮಾರಸ್ವಾಮಿ)**
ಮುಖ್ಯಮಂತ್ರಿ

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರಾಣೇಶ್.ಎಂ.ಕೆ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 263ಕ್ಕೆ ಅನುಬಂಧ–1

ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ 31–3–2018 ರಲ್ಲಿದ್ದಂತೆ ಮಂಜೂರಾದ ಮತ್ತು ಖಾಲಿಯಿರುವ ಹುದ್ದೆಗಳ ವಿವರಗಳು

| ಕ್ರಮ ಸಂಖ್ಯೆ | ವಿದ್ಯುತ್ ಸರಬರಾಜು ಕಂಪನಿ | ಮಂಜೂರಾದ ಹುದ್ದೆಗಳ ಸಂಖ್ಯೆ | ಖಾಲಿಯಿರುವ ಹುದ್ದೆಗಳ ಸಂಖ್ಯೆ |
|---|---|---|---|
| 1 | ಬೆ.ವಿ.ಸ.ಕಂ. | 23,198 | 7,300 |
| 2 | ಮ.ವಿ.ಸ.ಕಂ. | 9,032 | 3,472 |
| 3 | ಚಾ.ವಿ.ಸ.ನಿ. | 10,442 | 3,522 |
| 4 | ಹು.ವಿ.ಸ.ಕಂ | 17,181 | 7,402 |
| 5 | ಗು.ವಿ.ಸ.ಕಂ. | 10,292 | 3,238 |
| | **ಒಟ್ಟು** | **70,145** | **24,934** |

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರಾಣೇಶ್.ಎಂ.ಕೆ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 263ಕ್ಕೆ ಅನುಬಂಧ–2

ಕಳೆದ 5 ವರ್ಷಗಳ ವಿದ್ಯುತ್ ಸರಬರಾಜು ಕಂಪನಿಗಳ ವಾರ್ಷಿಕ ಲಾಭ/ನಷ್ಟದ ವರ್ಷವಾರು ವಿವರಗಳು

| ಕ್ರಮ ಸಂಖ್ಯೆ | ವಿದ್ಯುತ್ ಸರಬರಾಜು ಕಂಪನಿ | ಲಾಭ(+)/ನಷ್ಟ(–)ದ ವಿವರಗಳು (ರೂ.ಕೋಟಿಗಳಲ್ಲಿ) | | | | |
|---|---|---|---|---|---|---|
| | | 2013–14 | 2014–15 | 2015–16 | 2016–17 | 2017–18 (ತಾತ್ಕಾಲಿಕ) |
| 1 | ಬೆ.ವಿ.ಸ.ಕಂ. | 76.10 | 113.44 | 119.58 | 84.77 | 84.77 |
| 2 | ಮ.ವಿ.ಸ.ಕಂ. | 0.20 | 13.93 | 11.14 | 12.94 | 15.11 |
| 3 | ಚಾ.ವಿ.ಸ.ನಿ. | –15.61 | 40.27 | 7.92 | 21.44 | 2017–18 ರ ಸಾಲಿನ ಅಂತಿಮ ಲೆಕ್ಕಗಳು ತಯಾರಿಕಾ ಹಂತದಲ್ಲಿದ್ದು ಈವರೆಗೆ ಅಂತಿಮಗೊಂಡಿರುವುದಿಲ್ಲ. |
| 4 | ಗು.ವಿ.ಸ.ಕಂ. | 37.52 | –109.89 | –131.25 | –312.84 | |
| 5 | ಹು.ವಿ.ಸ.ಕಂ | –576.25 | 30.26 | –372.73 | –943.40 | –117.26 |

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರಾಣೇಶ್.ಎಂ.ಕೆ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 263ಕ್ಕೆ
ಅನುಬಂಧ–3

ಕಳೆದ 5 ವರ್ಷಗಳಲ್ಲಿ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಬಾಕಿಯಿರುವ ವಿದ್ಯುತ್ ಬಿಲ್ಲಿನ ಮೊತ್ತ ಹಾಗೂ ವಸೂಲಾದ ಮೊತ್ತದ ಸರಾಸರಿ ಪ್ರಮಾಣದ ವರ್ಷಾವಾರು ವಿವರಗಳು

(ರೂ.ಕೋಟಿಗಳಲ್ಲಿ)

| ವಿದ್ಯುತ್ ಸರಬರಾಜು ಕಂಪನಿ | ವರ್ಷ | ವಿದ್ಯುತ್ ಬಿಲ್ಲಿನ ಬೇಡಿಕೆ ಮೊತ್ತ | ವಸೂಲಾದ ಮೊತ್ತ | ಶೇಕಡವಾರು ವಸೂಲಾತಿ | ಬಾಕಿಯಿರುವ ಮೊತ್ತ |
|---|---|---|---|---|---|
| ಬೆ.ವಿ.ಸ.ಕಂ | 2013–14 | 11560 | 11147.20 | 96.42 | 4156.03 |
| | 2014–15 | 13385 | 12884.05 | 96.25 | 4552.18 |
| | 2015–16 | 14218 | 14049.00 | 98.81 | 4692.04 |
| | 2016–17 | 15838 | 15543 | 98.14 | 3383.57 |
| | 2017–18 | 18012 | 18674 | 103.68 | 3741.85 |
| ಮ.ವಿ.ಸ.ಕಂ | 2013–14 | 2010.10 | 1963.49 | 97.68 | 506.78 |
| | 2014–15 | 2263.11 | 2170.06 | 95.89 | 599.83 |
| | 2015–16 | 2448.71 | 2496.86 | 101.97 | 551.68 |
| | 2016–17 | 2909.11 | 2885.90 | 99.20 | 574.89 |
| | 2017–18 | 3321.27 | 3498.17 | 105.33 | 398.00 |
| ಚಾವಿ.ಸ.ನಿ. | 2013–14 | 2460.86 | 2407.16 | 97.82 | 1403.79 |
| | 2014–15 | 2703.15 | 2561.17 | 97.45 | 1545.77 |
| | 2015–16 | 2919.56 | 2963.06 | 101.49 | 1502.27 |
| | 2016–17 | 3638.57 | 4070.56 | 111.87 | 986.78 |
| | 2017–18 | 3745.17 | 3653.75 | 97.55 | 1064.76 |
| ಹು.ವಿ.ಸ.ಕಂ. | 2013–14 | 4406.99 | 4271.61 | 96.93 | 1921.89 |
| | 2014–15 | 5026.88 | 4781.22 | 95.11 | 2167.55 |
| | 2015–16 | 5762.32 | 5710.59 | 99.10 | 2219.28 |
| | 2016–17 | 6100.46 | 6108.9 | 100.14 | 2210.83 |
| | 2017–18 | 7065.89 | 6958.12 | 98.47 | 2318.76 |
| ಗು.ವಿ.ಸ.ಕಂ | 2013–14 | 2892.75 | 2652.17 | 91.68 | 1687.70 |
| | 2014–15 | 3115.30 | 3042.06 | 97.66 | 1751.05 |
| | 2015–16 | 4070.19 | 4033.61 | 99.10 | 1845.41 |
| | 2016–17 | 3776.44 | 3676.59 | 97.36 | 1959.69 |
| | 2017–18 | 4241.11 | 4023.65 | 9ಮ4.87 | 2177.12 |